**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ,**
**ಶೋರಾಪುರ.**
**ಸಿ.ಸಿ. ನಂ.140/2019**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಸಂಗನಗೌಡ | ಚಾಸಾ ಃ 07 |
| ತಂದೆ ಹೆಸರು | ಃ ನಾನಾಗೌಡ ಹೊಸಮನಿ | ಪ್ರಾಸಾ ಃ 02 |
| ವಯಸ್ಸು | ಃ 37 ವರ್ಷ | |
| ವೃತ್ತಿ | ಃ ಒಕ್ಕಲುತನ | |
| ವಾಸ ಸ್ಥಳ | ಃ ಕೂಡ್ಲಗಿ | |

**ಸಾಕ್ಷಿಗೆ ಇಂದು ದಿನಾಂಕಃ 21.04.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ**

ಚಾಸಾ-1 ನನ್ನ ತಂದೆ, ಚಾಸಾ-6 ನನ್ನ ಅಣ್ಣ, ಚಾಸಾ-4 ಮತ್ತು 5 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇರುತ್ತದೆ. ನಮಗೂ ಮತ್ತು ಆರೋಪಿತರಿಗೂ ಹಳ್ಳದ ನೀರಿಗೆ ಸಂಬಂಧಿಸಿದಂತೆ ಜಗಳವಾಗಿರುತ್ತದೆ. ದಿನಾಂಕ 03-04-2014 ರಂದು ಬೆಳಿಗ್ಗೆ 10 ಗಂಟೆ ಸುಮಾರಿಗೆ ನನ್ನ ಅಣ್ಣನಾದ ಮಲ್ಲಗೌಡ ಕೂಡ್ಲೆಪ್ಪನ ಗುಡಿಯ ಹತ್ತಿರ ನಿಂತಿದ್ದನು. ಆಗ ಆರೋಪಿತರೆಲ್ಲರೂ ಕೈಯಲ್ಲಿ ಕಲ್ಲು, ಕಟ್ಟಿಗೆ ಹಿಡಿದುಕೊಂಡು ಬಂದವರೇ ಚಾಸಾ-6 ರವರಿಗೆ ನಮ್ಮ ಹಳ್ಳದಿಂದ ನೀರನ್ನು ನಿಮ್ಮ ಹೊಲಕ್ಕೆ ಯಾಕೆ ತೆಗೆದುಕೊಳ್ಳುತ್ತೀರಿ ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ಆಗ ನಾನು ಮತ್ತು ಚಾಸಾ-1 ರವರು ಹೋಗಿ ನೋಡಲಾಗಿ, ಆರೋಪಿತರು ಚಾಸಾ-6 ರವರೊಂದಿಗೆ ತಕಾರಾರು ಮಾಡುತ್ತಿದ್ದರು. ಆಗ ನನ್ನ ತಂದೆ ಚಾಸಾ-1 ರವರು ನನ್ನ ಮಗನ ಜೊತೆ ಯಾಕೆ ತಕರಾರು ಮಾಡುತ್ತಿದ್ದೀರಿ ಅಂತ ಕೇಳಿದ್ದಕ್ಕೆ, ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು, 4 ನೇ ಆರೋಪಿತನು ಕಟ್ಟಿಗೆಯಿಂದ ನನಗೆ ಕಪಾಳಕ್ಕೆ ಹೊಡೆದಿರುತ್ತಾನೆ. ನನ್ನ ತಂದೆಯಾದ ಚಾಸಾ-1 ರವರಿಗೆ 3 ನೇ ಆರೋಪಿತನು ನೆಲಕ್ಕೆ ಕೆಡವಿ ಕೂದಲು ಹಿಡಿದು ತಲೆಗೆ ಗುದ್ದಿರುತ್ತಾನೆ. ನಾನು ಬಿಡಿಸಲು ಹೋದಾಗ 1 ನೇ ಆರೋಪಿತನು ನನ್ನ ಬಲಗೈ ಮೊಣಕೈ ಕೆಳಗಡೆ ಹಲ್ಲಿನಿಂದ ಕಚ್ಚಿ ಗಾಯಮಾಡಿರುತ್ತಾನೆ. ನಂತರ 5 ನೇ

ಆರೋಪಿತನು ಚಾಸಾ-6 ರವರಿಗೆ ಕಲ್ಲಿನಿಂದ ಬೆನ್ನಿಗೆ ಗುದ್ದಿರುತ್ತಾನೆ. ನಂತರ 2ನೇ ಆರೋಪಿತನು ನನ್ನ ಮೊಣಕಾಲು ಕೆಳಗೆ ಗಾಯಪಡಿಸಿರುತ್ತಾನೆ. ನಂತರ ಚಾಸಾ-4 ಮತ್ತು 5 ರವರ ಬಂದು ಜಗಳ ಬಿಡಿಸಿರುತ್ತಾರೆ. ನಾನು ಮೇಲೆ ಹೇಳಿದಂತೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಮುದ್ದೇಮಾಲನ್ನು ಗುರುತಿಸುತ್ತೇನೆ. ಅದು ಈಗಾಗಲೇ ಎಂ.ಓ 1 ಎಂದು ಗುರುತಾಗಿರುತ್ತದೆ.

**ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಎಂ.ಎಂ.ಹೆಚ್ ವಕೀಲರಿಂದಃ**

ಈ ಪ್ರಕರಣ ಹೊರತುಪಡಿಸಿ ಇನ್ನೂ 4 ಪ್ರಕರಣಗಳು ನನ್ನ ಮೇಲೆ ಇದೇ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿ ಇರುತ್ತವೆ ಎಂದರೆ ಸರಿ. ನಾವು ಸಹಿತ ಈ ಆರೋಪಿತರನ್ನು ಹೊರತುಪಡಿಸಿ ಬೇರೆಯವರ ಮೇಲೆ 2-3 ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ನಮ್ಮ ಅಣ್ಣ-ತಮ್ಮಂದಿರು ಇರುತ್ತಾರೆ ಎಂದು ನುಡಿಯುತ್ತಾರೆ. ಸುಮಾರು 10-12 ವರ್ಷಗಳಿಂದ ನಾನು ನ್ಯಾಯಾಲಯಕ್ಕೆ ಬರುತ್ತಿದ್ದೇನೆ ಎಂದರೆ ಸರಿ. ನಮಗೂ ಮತ್ತು ಆರೋಪಿತರಿಗೂ ಹಳ್ಳದ ಸಂಬಂಧಿಸಿದಂತೆ ಜಗಳ ಇರುತ್ತವೆ ಎಂದರೆ ಸರಿ. ಘಟನೆ ನಡೆದಾಗ ನಾನು ಮನೆಯಲ್ಲಿ ಇದ್ದೆನು. ಘಟನೆ ನಡೆಯುವಾಗ ನಾನು ಮನೆಯಲ್ಲಿ ಇದ್ದೆನು ಅಂತ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನಾನು ಜಗಳ ನಡೆಯುವಾಗ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಜಗಳ ನಡೆದಿದೆ ಅಂತ ನನಗೆ ಜನರು ಹೇಳಿರುತ್ತಾರೆ ಮತ್ತು ಸಪ್ಪಳ ಸಹ ಕೇಳಿರುತ್ತದೆ, ಆಗ ನಾನು ಹೋಗಿರುತ್ತೇನೆ. ನಮ್ಮ ಮನೆಗೂ ಮತ್ತು ಘಟನಾ ಸ್ಥಳಕ್ಕೂ 200 ಮೀಟರ ದೂರು ಇರುತ್ತದೆ. ಗುಡಿಯಿಂದ ನಮ್ಮ ಮನೆಗಳ ನಡುವೆ 8-10 ಮನೆಗಳು ಇರುತ್ತವೆ ಎಂದರೆ ಸರಿ. ಜಗಳ ನಡೆದಾಗ ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ತಂದೆ ಇದ್ದೆವು. ನಾನು ಮತ್ತು ನಮ್ಮ ತಂದೆ ಮನೆಯಲ್ಲಿ ಇದ್ದೆವು ಎಂದು ಪೋಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ.

**02.** ಜಗಳ ನಡೆದಾಗ ಸುತ್ತಮೂತ್ತಲಿನ ಮನೆಗಳ 10-20 ಜನ ಸೇರಿದ್ದರು. ಸದರಿಯವರ ಹೆಸರು ಬಸವರಾಜ ಕೆಂಭಾವಿ, ಚಾಸಾ-2, ಸಿದ್ದಪ್ಪ ಪೂಜಾರಿ ಇದ್ದರು. ಸಾಕ್ಷಿದಾರರನ್ನು ಹೊರತುಪಡಿಸಿ ಬೇರೆಯವರ ಹೆಸರು ಹೇಳಲು ಬರುತ್ತದೆ. ಅವರೆಂದರೆ ಮುದಿಯಪ್ಪ ಪೂಜಾರಿ, ಬಸವಂತ್ರಾಯ ಯತ್ನಾಳ ಇದ್ದರು. ಸದರಿಯವರು ಇದ್ದರು ಎಂದು ಪೋಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ.

**03.** ಆರೋಪಿತರು ನನಗೆ ಯಾವ ಕಪಾಳಕ್ಕೆ ಹೊಡೆದಿರುತ್ತಾರೆ ಎಂದು ನಾನು ಪೋಲೀಸರಿಗೆ ಹೇಳಿರುತ್ತೇನೆ. ಹಾಗೆ ನಾನು ಯಾವುದೇ ಹೇಳಿಕೆ ಪೋಲೀಸರಿಗೆ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನಿಗೆ ತೆರಚಿದ ಗಾಯವಾಗಿದ್ದವು, ರಕ್ತ ಗಾಯವಾಗಿರುವುದಿಲ್ಲ. ನನ್ನ ಬಟ್ಟೆಗೆ ರಕ್ತದ ಕಲೆಗಳು ಆಗಿತ್ತು. ಸದರಿ ಬಟ್ಟೆಯನ್ನು ನಾನು ಪೋಲೀಸರಿಗೆ ಕೊಟ್ಟಿರುತ್ತೇನೆ. ಪೋಲೀಸರಿಗೆ ಕಲ್ಲನ್ನು ನಾನೇ ಕೊಟ್ಟಿರುತ್ತೇನೆ. ಆ ದಿನ ಯಾವುದೇ ಜಗಳ ನಡೆದಿಲ್ಲ, ಆರೋಪಿತರು ನನಗಾಗಲಿ, ನನ್ನ ಅಣ್ಣನಿಗಾಗಲಿ ಹೊಡೆದಿರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೂ ಆರೋಪಿತರಿಗೂ ಹಳ್ಳ ಮತ್ತು ದಾರಿಯ ಸಲುವಾಗಿ ಜಗಳ ಇರುತ್ತದೆ, ಆದ್ದರಿಂದ ಆರೋಪಿತರ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು, ನನ್ನ ತಂದೆ, ನಮ್ಮ ಅಣ್ಣ 15 ವರ್ಷಗಳಿಂದ ನ್ಯಾಯಾಲಯಕ್ಕೆ ಬರುತ್ತಿದ್ದು, ಆರೋಪಿತರು ನ್ಯಾಯಾಲಯಕ್ಕೆ ತಿರುಗಾಡಲಿ ಎಂದು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** ಃ ಇಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.